~~1st ... 22869923~~ -320-

Balsubramanium AAO

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಆರು ನಬಾರ್ಡ್ ಯೋಜನೆಗಳಿಗೆ ಸಂಬಂಧಿಸಿದಂತೆ 2000-01 ವರ್ಷದ ಆಡಿಟ್ ವರದಿಯ ಬಗ್ಗೆ ಅಧಿಕಾರೇತರ ಸಮಿತಿ ರಚಿಸುವ ಬಗ್ಗೆ

* * * *

ಓದಲಾಗಿದೆ:

1. ಮಹಾಲೇಖಪಾಲರು, ಬೆಂಗಳೂರು ರವರ ಆಡಿಟ್ ವರದಿ (ಸಿವಿಲ್) ದಿನಾಂಕ:31-03-2001

ಪ್ರಸ್ತಾವನೆ:

2001ರ ಮಾರ್ಚ್ ಅಂತ್ಯಕ್ಕೆ ನೀಡಿರುವ ಮಹಾಲೇಖಪಾಲರು, ಆಡಿಟ್ ವರದಿ (ಸಿವಿಲ್) ನಲ್ಲಿ ಜಲ ಸಂಪನ್ಮೂಲ ಇಲಾಖೆಯು ನಬಾರ್ಡ್ ಅಡಿ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ ಆಕ್ಷೇಪಣೆಗಳನ್ನು ನೀಡಿರುತ್ತಾರೆ. ಈ ಆಕ್ಷೇಪಣೆಗಳ ಬಗ್ಗೆ ಯೋಜನಾಧಿಕಾರಿಗಳಿಂದ ನಿರ್ದಿಷ್ಟ ಮಾಹಿತಿಗಳು ಸ್ವೀಕೃತವಾಗಿಲ್ಲದೇ ಇರುವುದರಿಂದ ಆಡಿಟ್ ವರದಿಯಲ್ಲಿ ಸೂಚಿಸಿರುವ ಈ ಕೆಳಕಂಡ ಯೋಜನೆಗಳಲ್ಲಿ ನಬಾರ್ಡ್ ಅಡಿ ಕೈಗೊಳ್ಳಲಾದ ಕಾಮಗಾರಿಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಒಂದು ಸಮಿತಿಯನ್ನು ಸರ್ಕಾರದ ಮಟ್ಟದಲ್ಲಿ ರಚಿಸಲು ತೀರ್ಮಾನಿಸಿದೆ.

| | | | |
|---|---|---|---|
| 1) | ವಾಟೆಹೊಳೆ | 4) | ಬೆಣ್ಣೆತೊರಾ ✓ being transferred |
| 2) | ಚುಲ್ಕಿನಾಲಾ ✓ | 5) | ಅಮರ್ಜಾ ✓ |
| 3) | ಮಸ್ಕಿನಾಲಾ – IEZ. | 6) | ಲೋಯರ್ ಮುಲ್ಲಾಮಾರಿ ✓ |

2. ಮೇಲಿನ ಕಂಡಿಕೆಯಲ್ಲಿ ತಿಳಿಸಿರುವ ಯೋಜನೆಗಳಲ್ಲಿ ನಬಾರ್ಡ್ ಅಡಿ ಕೈಗೊಳ್ಳಲಾದ ಕಾಮಗಾರಿಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಈ ಕೆಳಕಂಡ ಸಮಿತಿಯನ್ನು ರಚಿಸಲು ತೀರ್ಮಾನಿಸಿದೆ.

1. ಶ್ರೀ ಬಾಲಿಹಾಳ, ನಿವೃತ್ತ ಮಹಾ ಲೇಖಪಾಲರು
2. ಶ್ರೀ ಆರ್.ಜಿ.ನಾಡಗೇರ, ನಿವೃತ್ತ ಅಧೀಕ್ಷಕ ಇಂಜಿನಿಯರ್
3. ಶ್ರೀ ಕೆ.ಪ್ರೇಮನಾಥ್, ಕಾರ್ಯಪಾಲಕ ಇಂಜಿನಿಯರ್ - ಸದಸ್ಯ ಕಾರ್ಯದರ್ಶಿ ಮೌಲ್ಯಮಾಪನ ಮತ್ತು ಉಸ್ತುವಾರಿ, ಬಸವ ಭವನ, ಬೆಂಗಳೂರು.

3. ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಜಸಂಇ 16 ಪಿಎಸಿ 2003, ಬೆಂಗಳೂರು, ದಿನಾಂಕ:18-07-2003**

ಜಲ ಸಂಪನ್ಮೂಲ ಇಲಾಖೆಯಲ್ಲಿ ನಬಾರ್ಡ್ ಅಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ಬಗ್ಗೆ 2001ರ ಮಾರ್ಚ್ ಅಂತ್ಯಕ್ಕೆ ನೀಡಿರುವ ಮಹಾಲೇಖಪಾಲಕರವರ ವಾರ್ಷಿಕ ಆಡಿಟ್ ವರದಿಯಲ್ಲಿ ನೀಡಿರುವ ಆಕ್ಷೇಪಣೆಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ನೇಮಕ ಮಾಡಲಾಗಿದೆ

1. ಶ್ರೀ ಬಾಲಿಹಾಳ, ನಿವೃತ್ತ ಮಹಾ ಲೇಖಪಾಲರು
2. ಶ್ರೀ ಆರ್.ಜಿ.ನಾಡಗೇರ, ನಿವೃತ್ತ ಅಧೀಕ್ಷಕ ಇಂಜಿನಿಯರ್
3. ಶ್ರೀ ಕೆ.ಪ್ರೇಮನಾಥ್, ಕಾರ್ಯಪಾಲಕ ಇಂಜಿನಿಯರ್-ಸದಸ್ಯ ಕಾರ್ಯದರ್ಶಿ ಮೌಲ್ಯಮಾಪನ ಮತ್ತು ಉಸ್ತುವಾರಿ, ಬಸವ ಭವನ, ಬೆಂಗಳೂರು.

2. ಸದರಿ ಸಮಿತಿಯು ಈ ಕೆಳಕಂಡ ಯೋಜನೆಗಳ ನಬಾರ್ಡ್ ನೆರವಿನಡಿ ಕೈಗೊಳ್ಳಲಾದ ಕಾಮಗಾರಿಗಳ ಬಗ್ಗೆ 2001ರ ಮಾರ್ಚ್ ಅಂತ್ಯದ ಆಡಿಟ್ ವರದಿಯಲ್ಲಿ ನೀಡಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ ವರದಿಯನ್ನು ಸರ್ಕಾರಕ್ಕೆ ಎರಡು ತಿಂಗಳೊಳಗಾಗಿ ಸಲ್ಲಿಸುವುದು.

| | | | |
|---|---|---|---|
| 1. | ಗಂಡೋರಿನಾಲ | 4. | ಬೆಣ್ಣೆತೊರಾ |
| 2. | ಚುಲ್ಕಿನಾಲಾ | 5. | ಅಮರ್ಜಾ |
| 3. | ಮಸ್ಕಿನಾಲಾ | 6. | ಲೋಯರ್ ಮುಲ್ಲಾಮಾರಿ |

3. ತನಿಖೆ ಸಮಯದಲ್ಲಿ ಯೋಜನೆಗಳಿಗೆ ಸಂಬಂಧಪಟ್ಟ ಮುಖ್ಯ ಇಂಜಿನಿಯರ್ ರವರು ಸಮಿತಿ ಸದಸ್ಯರಿಗೆ ಅಗತ್ಯವಾದ ಎಲ್ಲಾ ಮಾಹಿತಿಗಳನ್ನು ಒದಗಿಸಿ ಸಹಕರಿಸುವಂತೆ ಕೋರಲಾಗಿದೆ.

4. ಸದರಿ ಸಮಿತಿಯ ಸದಸ್ಯರುಗಳಿಗೆ ನೀಡಲಾಗುವ ಪ್ರಮಾಣ ಭತ್ಯೆ, ದಿನ ಭತ್ಯೆ, ಇತ್ಯಾದಿಗಳನ್ನು ಸರ್ಕಾರಿ ಆದೇಶ ಸಂಖ್ಯೆ:ಎಫ್ ಡಿ 2 ಎಸ್ ಆರ್ ಎ 99, ದಿನಾಂಕ:22-04-99 ರನ್ವಯ ಪಾವತಿಸತಕ್ಕದ್ದು.

5. ಸದರಿ ಸಮಿತಿಗೆ ತಗಲುವ ವೆಚ್ಚವನ್ನು ಅಂತಹ ಯೋಜನೆಗಳ ನಿರ್ವಹಣಾ ಲೆಕ್ಕ ಶೀರ್ಷಿಕೆ ಅಡಿ ನೀಡಲಾದ ಅನುದಾನದಲ್ಲಿ ಭರಿಸತಕ್ಕದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಟಿ. ಎಲ್. ಜಗದೀಶ್)
ವಿಶೇಷ ಕರ್ತವ್ಯಾಧಿಕಾರಿ(ತಾಂತ್ರಿಕ, ಎಂಎಂಐ-3),
ಜಲ ಸಂಪನ್ಮೂಲ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು (ಲೆಕ್ಕಪತ್ರ/ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ವಿಭಾಗಾಧಿಕಾರಿಗಳು, ಮೈಸೂರು ವಿಭಾಗ, ಮೈಸೂರು.
3. ಶ್ರೀ ಬಾಲಹಾಳ, ಮಹಾ ಲೇಖಪಾಲರು (ನಿವೃತ್ತ)
4. ಶ್ರೀ ಆರ್.ಜಿ.ನಾಡಗೇರ, ಅಧೀಕ್ಷಕ ಇಂಜಿನಿಯರ್ (ನಿವೃತ್ತ)
5. ಶ್ರೀ ಕೆ.ಪ್ರೇಮನಾಥ್, ಕಾ.ಇಂ., ಮೌಲ್ಯಮಾಪನ ಮತ್ತು ಉಸ್ತುವಾರಿ, ಬಸವ ಭವನ, ಬೆಂಗಳೂರು.
6. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತಸಹಾಯಕರು, ಕರ್ನಾಟಕ ಸರ್ಕಾರ, ಬೆಂಗಳೂರು
7. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
8. ಮುಖ್ಯ ಇಂಜಿನಿಯರ್, ನೀ.ಯೋ.ವ, ಗುಲ್ಬರ್ಗಾ/ನೀ.ಕೇ.ವ.ಮುನಿರಾಬಾದ/ನೀ.(ದ)ವ. ಮೈಸೂರು
9. ಉಪಕಾರ್ಯದರ್ಶಿ.ಕೆ.ಬಿ.ಜೆ.ಎನ್/ ಉಪಕಾರ್ಯದರ್ಶಿ, ಎಂ.ಎಂ.ಐ
10. ವಿಶೇಷ ಕರ್ತವ್ಯಾಧಿಕಾರಿ(ಕಾವೇರಿ ಘಟಕ)/ಅಧೀನ ಕಾರ್ಯದರ್ಶಿ. (ತಾಂತ್ರಿಕ-1)
11. ಅಧೀಕ್ಷಕ ಇಂಜಿನಿಯರ್, ಮೌಲ್ಯಮಾಪನ ಮತ್ತು ಉಸ್ತುವಾರಿ, ಬಸವ ಭವನ, ಬೆಂಗಳೂರು.
12. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು